ಓ.ಎಸ್. 101/2019 ಪಿ.ಡಬ್ಲ್ಯೂಃ 4

ದಿನಾಂಕಃ 13.12.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.

**<u>ಪಾಟೀಸವಾಲುಃ</u>** ಪ್ರತಿವಾದಿಯ ಪರ ಶ್ರೀ ವಕೀಲರಿಂದಃ

1. ನಾನು ಮೂಲತಃ ಹೆಚ್.ಡಿ.ಕೋಟೆ ತಾ, ಹಂಪಾಪುರ ಹೋಬಳಿ ಕೋಳಗಾಲ ಗ್ರಾಮದವನು. ನಾನು 2013 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಾನು ಸೇವೆಯಿಂದ ವಜಾಗೊಂಡಿರುತ್ತೇನೆ. ನನ್ನ, ನನ್ನ ಹೆಂಡತಿ ಹಾಗೂ ಇಬ್ಬರು ಮಕ್ಕಳ ವಿರುದ್ದ ಎಸ್.ಸಿ.169/2003 ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ನನ್ನ ವಿರುದ್ದ ದಂಡ ಪ್ರಕ್ರಿಯೆ ಸ್ಥುತೆ ಕಲಂ 307 ರ ರೀತಿ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ದಿಃ 30.04.2010 ರಂದು ನ್ಯಾಯಾಲಯ ನನಗೆ ಶಿಕ್ಷೆಗೆ ಅರ್ಹರು ಎಂದು ತೀರ್ಮಾನ ಮಾಡಿರುತ್ತದೆ ಎಂದರೆ ಸರಿ. ಸದರಿ ಆದೇಶವನ್ನು ಘನ ಉಚ್ಚ ನ್ಯಾಯಾಲಯದವರು ಕೂಡ ಎತ್ತಿ ಹಿಡಿದಿರುತ್ತಾರೆ ಎಂದರೆ ಸರಿ. ಈಗ ನಾನು ಮಾನ್ಯ ಸರ್ವೋಚ್ಚ ನ್ಯಾಯಾಲಕ್ಕೆ ಮೇಲ್ಮನವಿ ಸಲ್ಲಿಸಿರುತ್ತೇನೆಂದು ಸಾಕ್ಷಿ ಹೇಳುತ್ತಾರೆ.

2. 19.12.1997 ರಲ್ಲಿ ಇದೇ ನ್ಯಾಯಾಲಯದಲ್ಲಿ ನಾವು ಭಾಗ ಕೇಳಿ ದಾವೆ ಸಲ್ಲಿಸಿದ್ದೇವು ಎಂದರೆ ನಮ್ಮ ಅಣ್ಣ ತಮ್ಮಂದಿರ ವಿರುದ್ದ ಹಾಕಿದ್ದೇ ಎಂದ ಸಾಕ್ಷಿ ಹೇಳುತ್ತಾರೆ. ಸದರಿ ದಾವೆಯಲ್ಲಿ ನಾನು ನನ್ನ ತಂದೆ ಚಿಕ್ಕಯ್ಯ ಇವರಿಗೆ ಇಬ್ಬರು ಹೆಂಡತಿಯರು ಎಂದು ಹೇಳಿದ್ದೆ ಎಂದರೆ ಸರಿ. ಸದರಿ ದಾವೆಯನ್ನು ನಾನು ನನ್ನ ತಂದೆಯ ಹಿರಿಯ ಹೆಂಡತಿ ಮಕ್ಕಳು ಹಾಗಾ ನನ್ನ ತಾಯಿಯ ವಿರುದ್ದ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆ ಓ.ಎಸ್ 208/1997 ರಲ್ಲಿ ದಿಃ13.06.2003 ರಲ್ಲಿ ಇದೇ ನ್ಯಾಯಾಲಯದಲ್ಲಿ ವಜಾಗೊಂಡಿರುತ್ತದೆ ಎಂದರೆ ಸರಿ. ಅದರ ವಿರುದ್ದ ನಾನು ಮೇಲ್ಮನವಿ ಸಲ್ಲಿಸಿಲ್ಲ. ಸದರಿ ದಾವೆಯಲ್ಲಿ ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದು ನಾನು ಹೇಳಿದ್ದು, ಆದರೆ ನ್ಯಾಯಾಲಯ ನಾನು ಚಿಕ್ಕಯ್ಯ ಅವರ ಮಗ ಎಂದು ರುಜುವಾತು ಪಡಿಸುವಲ್ಲಿ ವಿಫಲನಾಗಿರುತ್ತೇನೆಂದು ಆದೇಶ ಮಾಡಿದೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ ಜಾವೀದ್ ಅನ್ಸಾರಿ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹುಣಸೂರು.